ಕರ್ನಾಟಕ ಸರ್ಕಾರ

NCERT

ಸಂತಸದ ಗಣಿತ

ಗಣಿತ ಪಠ್ಯಪುಸ್ತಕ

ಭಾಗ–2

ಕನ್ನಡ ಮಾಧ್ಯಮ

1

ಒಂದನೇ ತರಗತಿ

© KSTBS NOT TO BE REPUBLISHED

विद्यया ऽमृतमश्नुते
एन सी ई आर टी
NCERT

राष्ट्रीय शैक्षिक अनुसंधान और प्रशिक्षण परिषद्
NATIONAL COUNCIL OF EDUCATIONAL RESEARCH AND TRAINING

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

ಪರಿವಿಡಿ



7.	ಅನಾಳ ಕುಟುಂಬ (ಅಳತೆ)	01
8.	ಸಂಖ್ಯೆಗಳೊಂದಿಗೆ ಮೋಜು (21 ರಿಂದ 99 ರವರೆಗಿನ ಸಂಖ್ಯೆಗಳು)	14
9.	ಉತ್ಸವ (ವಿನ್ಯಾಸಗಳು)	28
10.	ನಾನು ನನ್ನ ದಿನವನ್ನು ಹೇಗೆ ಕಳೆಯುವೆ? (ಸಮಯ)	36
11.	ಎಷ್ಟು ಸಲ? (ಗುಣಾಕಾರ)	43
12.	ನಾವು ಎಷ್ಟು ಖರ್ಚು ಮಾಡುತ್ತೇವೆ? (ಹಣ)	47
13.	ಎಷ್ಟೊಂದು ಆಟಿಕೆಗಳು (ದತ್ತಾಂಶಗಳ ನಿರ್ವಹಣೆ)	53
	ಒಗಟುಗಳು	55


@KTBS NOT TO BE REPUBLISHED

7 ಲೀನಾಳ ಕುಟುಂಬ

E1K8Y1


ಲೀನಾ ಕುಟುಂಬದ ಔತಣ ಕೂಟ

ಲೀನಾ ತನ್ನ ಕುಟುಂಬದೊಂದಿಗೆ ಹಳ್ಳಿಯೊಂದರಲ್ಲಿ ವಾಸವಾಗಿದ್ದಾಳೆ. ಅವಳು ತನ್ನ ಅಜ್ಜ ಅಜ್ಜಿಯರು, ಪೋಷಕರು ಮತ್ತು ಒಬ್ಬ ಸಹೋದರ ಶಾನ್ಬೋರ್‌ನೊಂದಿಗೆ ವಾಸವಾಗಿದ್ದಾಳೆ. ಅವಳ ಮಾವಂದಿರು, ಅತ್ತೆಯರು ಮತ್ತು ಸೋದರ ಸಂಬಂಧಿಗಳು ಅವಳ ಮನೆಯ ಸಮೀಪದಲ್ಲಿಯೇ ವಾಸಿಸುತ್ತಿದ್ದಾರೆ.



ಲೀನಾ ಸ್ಟೂಲ್ ಮೇಲೆ ನಿಂತಿದ್ದಾಳೆ. ಅವಳು ಎತ್ತರವಾಗಲು ಬಯಸುತ್ತಾಳೆ. ಕುಟುಂಬದ ಅತೀ ಹೆಚ್ಚು ಎತ್ತರವಾಗಿರುವ ಸದಸ್ಯನನ್ನು ಕಂಡುಹಿಡಿದು ವೃತ್ತ ಹಾಕಿ.

ಲೀನಾಳ ಕುಟುಂಬ, ಎಲ್ಲಾ ಕುಟುಂಬದ ಸದಸ್ಯರನ್ನು ಒಂದು ಔತಣಕೂಟಕ್ಕೆ ಆಹ್ವಾನಿಸಿತು.



© KSTBP NOT TO BE PUBLISHED



ನಾವು ಮಾತಾಡೋಣ

1. ಲೀನಾಳ ಕುಟುಂಬದಲ್ಲಿ ಎಷ್ಟು ಸದಸ್ಯರಿದ್ದಾರೆ?
2. ಕುಟುಂಬದ ಅತೀ ಎತ್ತರದ ಸದಸ್ಯರಿಗೆ ಟಿಕ್ ಮಾಡಿ,
3. ಕುಟುಂಬದ ಅತೀ ಕುಳ್ಳಗಿನ ಸದಸ್ಯರ ಮೇಲೆ ಟೋಪಿ ಚಿತ್ರಿಸಿ.
4. ಲೀನಾಳ ತಾಯಿಗಿಂತ ಎತ್ತರ ಹಾಗೂ ಲೀನಾಳ ತಂದೆಗಿಂತ ಕುಳ್ಳಗಿರುವವರು ಯಾರು?

5. ನಿಮ್ಮ ಕುಟುಂಬದ ಅತ್ಯಂತ ಎತ್ತರದ ಮತ್ತು ಅತ್ಯಂತ ಕುಳ್ಳಗಿನ ಸದಸ್ಯರು ಯಾರು?

6. ನಿಮ್ಮ ತರಗತಿಯಲ್ಲಿ ಅತೀ ಎತ್ತರದ ಮಗು ಯಾರು?

7. ನಿಮ್ಮ ತರಗತಿಯಲ್ಲಿ ನಿನಗಿಂತ ಎತ್ತರವಿರುವ ಎಷ್ಟು ಮಕ್ಕಳಿದ್ದಾರೆ?



NOT TO BE REPUBLISHED © KSTBP

ಲೀನಾ ಪರ್ವತ ಪ್ರದೇಶದಲ್ಲಿ ಗುಡಿಸಲು–ಆಕಾರದ ಮನೆಯೊಂದರಲ್ಲಿ ವಾಸಿಸುತ್ತಾಳೆ. ಚಿತ್ರದಲ್ಲಿ ಅವಳ ಮನೆಯನ್ನು ಗುರುತಿಸಬಲ್ಲಿರಾ? ಸರಿಯಾದ ಆಯ್ಕೆಗೆ ವೃತ್ತ ಹಾಕಿ:

1. ಅವಳ ಮನೆ ಅಂಗಡಿಗೆ **ಅತ್ಯಂತ ಹತ್ತಿರ/ಅತ್ಯಂತ ದೂರ** ಮತ್ತು ಶಾಲೆಗೆ **ಅತ್ಯಂತ ಹತ್ತಿರ/ ಅತ್ಯಂತ ದೂರ**ದಲ್ಲಿದೆ.


2. ಶಾಲೆಯು ಅಂಗಡಿಗೆ **ಅತ್ಯಂತ ಹತ್ತಿರ/ಅತ್ಯಂತ ದೂರ** ಮತ್ತು ಕೆಂಪು ಛಾವಣಿಯ ಮನೆಗಳಿಗೆ **ಅತ್ಯಂತ ಹತ್ತಿರ/ಅತ್ಯಂತ ದೂರ**ದಲ್ಲಿದೆ.

3. ಮಗು ಶಾಲಾ ಬಸ್‌ಗೆ **ಅತ್ಯಂತ ಹತ್ತಿರ/ಅತ್ಯಂತ ದೂರ** ಮತ್ತು ಶಾಲೆಯಿಂದ **ಅತ್ಯಂತ ಹತ್ತಿರ/ಅತ್ಯಂತ ದೂರ**ದಲ್ಲಿದೆ.

ವಿಸ್ಮಯಕಾರಿ ಸತ್ಯಗಳು

ಇದು ಸರ್ದಾರ್ ವಲ್ಲಭಬಾಯಿ ಪಟೇಲ್
ಮೂರ್ತಿಯಾಗಿದ್ದು ಏಕತೆಯ ಪ್ರತಿಮೆ
ಎಂದೂ ಕರೆಯಲ್ಪಡುತ್ತದೆ.
ಇದು ವಿಶ್ವದಲ್ಲಿಯೇ
ಅತ್ಯಂತ ಎತ್ತರವಾದ ಪ್ರತಿಮೆಯಾಗಿದೆ
ಮತ್ತು ಭಾರತದ ಗುಜರಾತ್‌ನಲ್ಲಿದೆ.

@KTBS NOT TO BE REPUBLISHED




ನಾವು ಮಾಡೋಣ

1. ಅತೀ ಹೆಚ್ಚು ಉದ್ದವಾಗಿರುವುದಕ್ಕೆ ಟಿಕ್ ✓ ಮಾಡಿ.

i.




ii.



2. ಅತ್ಯಂತ ಗಿಡ್ಡವಾಗಿರುವುದಕ್ಕೆ ಟಿಕ್ ✓ ಮಾಡಿ.

i.



ii.




3. ಅತೀ ಹೆಚ್ಚು ದಪ್ಪವಾಗಿರುವುದಕ್ಕೆ ಟಿಕ್ ✓ ಮಾಡಿ.

i.



ii.




4. ಅತ್ಯಂತ ತೆಳುವಾಗಿರುವುದಕ್ಕೆ ಟಿಕ್ ✓ ಮಾಡಿ.

i.



ii.



@KTBS NOT TO BE REPUBLISHED


ಯೋಚಿಸಿ ಮಾಡಿ

ಇದಕ್ಕಿಂತ ಹೆಚ್ಚು ಉದ್ದವಾಗಿರುವ ಕಡ್ಡಿ ಅಥವಾ ಬಿದಿರಿನ ಚಿತ್ರವನ್ನು ಚಿತ್ರಿಸಿ.

ಇದಕ್ಕಿಂತ ಕಡಿಮೆ ಉದ್ದವಿರುವ ಹಗ್ಗವನ್ನು ಚಿತ್ರಿಸಿ.




ಚಿತ್ರಾಳ ಸ್ವೆಟರ್‌ನ ಉದ್ದವನ್ನು ಅವಳ ಅಜ್ಜಿ ಗೇಣಿನ ಸಹಾಯದಿಂದ ಪರೀಕ್ಷಿಸುತ್ತಿದ್ದಾರೆ.




@KTBS NOT TO BE REPUBLISHED

ಕಡ್ಡಿ, ಮೇಜು, ಪೆನ್ಸಿಲ್ ಮತ್ತು ನೋಟ್ ಪುಸ್ತಕಗಳ ಉದ್ದವನ್ನು ಸಹ ಚಿತ್ರಾ ತನ್ನ ಗೇಣು ಬಳಸಿ ಕಂಡುಹಿಡಿಯಲು ಬಯಸುತ್ತಾಳೆ.









ಯೋಚಿಸಿ ಉತ್ತರಿಸಿ.

1. ನನ್ನ ಮೇಜು _____ ಗೇಣುಗಳಷ್ಟು ಉದ್ದವಿದೆ.
2. ನನ್ನ ಚೀಲ _____ ಗೇಣುಗಳಷ್ಟು ಉದ್ದವಿದೆ.
3. ನನ್ನ ತರಗತಿ ಕೋಣೆಯ ಕಪ್ಪುಹಲಗೆ _____ ಗೇಣುಗಳಷ್ಟು ಉದ್ದವಿದೆ.
4. ನನ್ನ ಗಣಿತ ಪುಸ್ತಕ _____ ಗೇಣುಗಳಷ್ಟು ಉದ್ದವಿದೆ.
5. ನನ್ನ ತೋಳು _____ ಗೇಣುಗಳಷ್ಟು ಉದ್ದವಿದೆ.
6. ನನ್ನ ಸ್ನೇಹಿತನ ತೋಳು _____ ಗೇಣುಗಳಷ್ಟು ಉದ್ದವಿದೆ.

ಈ ಎಲ್ಲಾ ವಸ್ತುಗಳ ಉದ್ದವನ್ನು ಕಂಡುಹಿಡಿಯಲು ಚಿತ್ರಾ ತನ್ನ ಗೇಣನ್ನು ಬಳಸಬಹುದೆ? ನಿಮ್ಮ ಸುತ್ತಲೂ ಒಂದು ಗೇಣಿಗಿಂತ ಕಡಿಮೆ ಉದ್ದವಿರುವ ವಸ್ತುಗಳನ್ನು ಗುರ್ತಿಸಿ ವೃತ್ತ ಹಾಕಿ. ಆ ವಸ್ತುಗಳ ಉದ್ದವನ್ನು ಕಂಡುಹಿಡಿಯಲು ನಾವು ಬೆರಳುಗಳನ್ನು ಬಳಸಬಹುದೇ?







@KTBS NOT TO BE REPUBLISHED




ನಾವು ಮಾಡೋಣ

ಈ ವಸ್ತುಗಳ ಉದ್ದವನ್ನು ಅಳೆಯಲು ನೀವು ಏನನ್ನು ಆಯ್ಕೆ ಮಾಡುವಿರಿ? ಗೇಣು ಅಥವಾ ಬೆರಳುಗಳು ಏಕೆ? ನಿಮ್ಮ ಆಯ್ಕೆಗಳಿಗೆ ಕೋಷ್ಟಕದಲ್ಲಿ ವೃತ್ತ ಹಾಕಿ. ಈ ವಸ್ತುಗಳ ಉದ್ದ ಕಂಡುಹಿಡಿಯುವ ಮೊದಲೇ ಊಹಿಸಿ.

ವಸ್ತುಗಳ ಹೆಸರು	ನೀವು ಬಳಸುವುದಕ್ಕೆ ವೃತ್ತ ಹಾಕಿ	ನನ್ನ ಊಹೆ	ನಾನು ಕಂಡುಕೊಂಡದ್ದು
ಬಾಟಲ್ 	 ಗೇಣು ಅಥವಾ ಬೆರಳುಗಳು		
ಚಮಚ 	 ಗೇಣು ಅಥವಾ ಬೆರಳುಗಳು		
ಪೆನ್ಸಿಲ್ 	 ಗೇಣು ಅಥವಾ ಬೆರಳುಗಳು		
ನನ್ನ ಸಹಪಾಠಿಯ ಮೂಗು 	 ಗೇಣು ಅಥವಾ ಬೆರಳುಗಳು		
ಕಾಲು 	 ಗೇಣು ಅಥವಾ ಬೆರಳುಗಳು		
ಬೀಗದ ಕೀಲಿ 	 ಗೇಣು ಅಥವಾ ಬೆರಳುಗಳು		

©KTBS NOT TO BE REPUBLISHED



ಹೆಜ್ಜೆಯಳತೆ	ನಾನು ಊಹಿಸಿದ ಹೆಜ್ಜೆಯಳತೆ	ನಾನು ಕಂಡುಹಿಡಿದ ಹೆಜ್ಜೆಯಳತೆ
ನನ್ನ ಆಸನ ಮತ್ತು ತರಗತಿ ಕೋಣೆಯ ಬಾಗಿಲಿನ ನಡುವಿನ ದೂರ		
ತರಗತಿ ಕೋಣೆಯ ಒಂದು ಬದಿ		
ಹಾಸಿಗೆ ಮತ್ತು ಶೌಚಾಲಯದ ನಡುವಿನ ದೂರ		
ನಿಮ್ಮ ತರಗತಿ ಕೋಣೆಯ ಎರಡು ಗೋಡೆಗಳ ನಡುವಿನ ದೂರ		






ನಾವು ಮಾಡೋಣ


1. ಹೆಚ್ಚು ಭಾರವಾಗಿರುವ ವಸ್ತುವಿಗೆ ಟಿಕ್ ✓ ಹಾಕಿ.

i.





ii.





2. ಹೆಚ್ಚು ಹಗುರವಾಗಿರುವ ವಸ್ತುವಿಗೆ ಟಿಕ್ ✓ ಹಾಕಿ.

i.





ii.






@KTBS NOT TO BE REPUBLISHED

3. ಹೆಚ್ಚು ಭಾರವಿರುವ ವಸ್ತುವಿಗೆ ಬಣ್ಣ ಹಾಕಿ.


i.




ii.



iii.




iv.




4. ಹೆಚ್ಚು ಹಗುರವಾಗಿರುವ ವಸ್ತುವಿಗೆ ಬಣ್ಣ ಹಾಕಿ.


i.




ii.



iii.



iv.



@KTBS NOT TO BE REPUBLISHED



ನಾವು ಮಾತನಾಡೋಣ

1. ನೀನು ಮತ್ತು ನಿನ್ನ ಸ್ನೇಹಿತ ಯಾರು ಹೆಚ್ಚು ಭಾರವಾಗಿದ್ದೀರಿ? ನೀನು ಅದನ್ನು ಹೇಗೆ ಕಂಡುಹಿಡಿಯುವೆ? ತರಗತಿಯಲ್ಲಿ ಚರ್ಚಿಸು.

2. ನಿಮ್ಮ ತೂಕ ಕಂಡುಕೊಳ್ಳಿ. ನಿಮ್ಮ ತೂಕವನ್ನು ಸಾಮಾನ್ಯವಾಗಿ ಹೇಗೆ ಮತ್ತು ಎಲ್ಲಿ ಕಂಡುಹಿಡಿಯುವಿರಿ ತಿಳಿಸಬಲ್ಲಿರಾ?

ನಾವು ಮಾಡೋಣ

1. ಬಕೆಟ್‌ನ್ನು ನೀರಿನಿಂದ ತುಂಬಿರಿ.



i. _____ ತಂಬಿಗೆಗಳಷ್ಟು ನೀರು ಬಕೆಟ್‌ನ್ನು ತುಂಬುತ್ತದೆ.

ii. _____ ಲೋಟಗಳಷ್ಟು ನೀರು ಬಕೆಟ್‌ನ್ನು ತುಂಬುತ್ತದೆ.

iii. _____ ಬಟ್ಟಲುಗಳಷ್ಟು ನೀರು ಬಕೆಟ್‌ನ್ನು ತುಂಬುತ್ತದೆ.

2. ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.


i. ನಿಮ್ಮ ನೀರಿನ ಬಾಟಲ್ ಎಷ್ಟು ಕಪ್ ನೀರಿನಿಂದ ತುಂಬಬಹುದು? _____


ii. ಈಗ ನಿಮ್ಮ ಸಹಪಾಠಿಯ ನೀರಿನ ಬಾಟಲ್‌ನ್ನು ಅದೇ ಕಪ್‌ನಿಂದ ತುಂಬಿಸಿ. ನಿಮ್ಮ ಸಹಪಾಠಿಯ ಬಾಟಲ್‌ನ್ನು ಎಷ್ಟು ಕಪ್‌ಗಳಿಂದ ತುಂಬಬಹುದು? _____


iii. ಯಾವ ಬಾಟಲ್‌ನಲ್ಲಿ ಹೆಚ್ಚು ನೀರು ಹಿಡಿಸುತ್ತದೆ? _____


iv. ಇನ್ನೊಂದು ಬಾಟಲ್‌ನೊಂದಿಗೆ ಪ್ರಯತ್ನಿಸಿ, ಯಾವುದರಲ್ಲಿ ಕಡಿಮೆ ನೀರು ಹಿಡಿಸುತ್ತದೆ?


3. ಯಾವುದರಲ್ಲಿ ಹೆಚ್ಚು ನೀರು ಹಿಡಿಸುತ್ತದೆ ಅದಕ್ಕೆ ವೃತ್ತ ಹಾಕಿ.












©KTBS NOT TO BE REPUBLISHED

4. ನೀರು ನಮಗೆ ತುಂಬಾ ಉಪಯುಕ್ತವಾಗಿದೆ.

ಕೊಟ್ಟಿರುವ ಚಟುವಟಿಕೆಗಳಿಗೆ ಬೇಕಾದ ನೀರಿನ ಪ್ರಮಾಣಕ್ಕೆ ಟಿಕ್ ✓ ಮಾಡಿ.

i. 

ಹಲ್ಲು ಉಜ್ಜಲು



ಒಂದು ಬಕೆಟ್ ನೀರು




ಒಂದು ತಂಬಿಗೆ ನೀರು

ii. 


ಸ್ನಾನ ಮಾಡಲು



ಒಂದು ಬಕೆಟ್ ನೀರು




ಒಂದು ಟ್ಯಾಂಕ್

iii. 

2 ಲೋಟಗಳಷ್ಟು ಲಿಂಬೆ ರಸ ತಯಾರಿಸಲು



ಒಂದು ಜಗ್‌ನಷ್ಟು ನೀರು




ಒಂದು ಬಕೆಟ್ ನೀರು

iv. 

ಗಿಡಕ್ಕೆ ನೀರು ಹಾಕಲು



ಒಂದು ತಂಬಿಗೆ ನೀರು



ಒಂದು ಬಕೆಟ್ ನೀರು

@KTBS NOT TO BE REPUBLISHED



ಯೋಜನಾ ಕಾರ್ಯ

1. ಶವರ್ ಅಥವಾ ಹರಿಯುವ ನಲ್ಲಿ ನೀರಿನ ಬದಲಿಗೆ ಸ್ನಾನಕ್ಕಾಗಿ ಬಕೆಟ್‌ನಲ್ಲಿ ನೀರನ್ನು ತೆಗೆದುಕೊಳ್ಳುವುದು ಏಕೆ ಮುಖ್ಯ ಎಂಬುದನ್ನು ಚರ್ಚಿಸಿ.
2. ಒಂದು ಭಾಗ ಗಿಡ್ಡ ಮತ್ತು ಇನ್ನೊಂದು ಭಾಗ ಉದ್ದವಾಗಿರುವಂತೆ ಬಣ್ಣದ ಕಾಗದದ ಪಟ್ಟಿಯನ್ನು ಹರಿದು ಅಂಟಿಸಿ. ಪಟ್ಟಿಗಳು ಬೇರೆ ಬೇರೆ ಅಳತೆಯಲ್ಲಿರಬೇಕು.

ಗಿಡ್ಡ ಇವು ಗಿಡ್ಡವಾಗಿವೆ.	**ಉದ್ದ** ಇವು ಉದ್ದವಾಗಿವೆ.

3. ಒಯ್ಯಲು ಸುಲಭವಾಗಿರುವ ಮತ್ತು ಕಷ್ಟವಾಗಿರುವ ವಸ್ತುಗಳನ್ನು ಪಟ್ಟಿ ಮಾಡಿ.

ಒಯ್ಯಲು ಸುಲಭವಾಗಿರುವುದು	ಒಯ್ಯಲು ಕಷ್ಟವಾಗಿರುವುದು

@KTBS
NOT TO BE REPUBLISHED

4. ಬೇರೆ ಬೇರೆ ಅಳತೆಯ ಬಾಟಲ್‌ಗಳು, ಬಟ್ಟಲುಗಳು ಮತ್ತು ಲೋಟಗಳನ್ನು ತೆಗೆದುಕೊಳ್ಳಿ. ಎಷ್ಟು ಲೋಟಗಳಷ್ಟು ಅಥವಾ ಬಟ್ಟಲುಗಳಷ್ಟು ನೀರು ಬಾಟಲ್‌ನ್ನು ತುಂಬಬಲ್ಲುದು ಎಂಬುದನ್ನು ಗಮನಿಸಿ. ಇವುಗಳಲ್ಲಿ ಯಾವುದು ಹೆಚ್ಚು ನೀರನ್ನು ಹಿಡಿದಿಟ್ಟುಕೊಳ್ಳಬಲ್ಲದು?


ಒಂದು ದಿನದಲ್ಲಿ ಎಷ್ಟು ಲೋಟ ನೀರು ಕುಡಿಯುತ್ತೀರಿ ಎಂದು ಮಕ್ಕಳನ್ನು ಕೇಳಿ ಅವರ ಸುತ್ತಮುತ್ತ ನೀರು ವ್ಯರ್ಥವಾಗುವುದರ ಬಗ್ಗೆ ಚರ್ಚಿಸಿ ಮತ್ತು ಅವರಲ್ಲಿ ಅರಿವು ಮೂಡಿಸಿ. ಲೋಟದಲ್ಲಿ ನೀರು ಉಳಿದರೆ ಅದನ್ನು ಎಸೆಯಬೇಕೆ ಅಥವಾ ಗಿಡಗಳಿಗೆ ಹಾಕಬೇಕೆ ಎಂಬಯದಾಗಿ ವಿಚಾರಿಸಿ. ಉಪಯೋಗವಿಲ್ಲದಿದ್ದಾಗ ನಲ್ಲಿಯನ್ನು ಮುಚ್ಚುವ, ನೀರಿನ ಪುನರ್ಬಳಕೆ ಮುಂತಾದ ನೀರಿನ ಇತರ ಸಂರಕ್ಷಣಾ ವಿಧಾನಗಳ ಬಗ್ಗೆಯೂ ಚರ್ಚಿಸಿ.




8 ಸಂಖ್ಯೆಗಳೊಂದಿಗೆ ಮೋಜು

M6C4U4

ಸಿಮ್ರಾನ್ ಕಿತ್ತಳೆಗಳನ್ನು ಪೆಟ್ಟಿಗೆಗಳಲ್ಲಿ ತುಂಬುತ್ತಿದ್ದಳು. ಪ್ರತಿ ಪೆಟ್ಟಿಗೆಯಲ್ಲಿ 10 ಕಿತ್ತಳೆಗಳನ್ನು ತುಂಬಬಹುದು. ಅವಳಿಗೆ ಎಷ್ಟು ಪೆಟ್ಟಿಗೆಗಳು ಬೇಕು?




ಅವಳು ಪೆಟ್ಟಿಗೆಗಳಲ್ಲಿ ಅವುಗಳನ್ನು ತುಂಬಿದಳು.




@KTBS NOT TO BE REPUBLISHED


ಅಲ್ಲಿ ಎಷ್ಟು ಕಿತ್ತಳೆಗಳಿವೆ ಎಂಬುದು ನಿಮಗೆ ತಿಳಿದಿದೆಯೇ?




21
ಇಪ್ಪತ್ತೊಂದು


22
ಇಪ್ಪತ್ತ ಎರಡು







ಇಪ್ಪತ್ತ ಮೂರು







24
ಇಪ್ಪತ್ತ ನಾಲ್ಕು







ಇಪ್ಪತ್ತೈದು











ಇಪ್ಪತ್ತಾರು





27
ಇಪ್ಪತ್ತೇಳು

@KTBS
NOT TO BE REPUBLISHED


		28 ಇಪ್ಪತ್ತೆಂಟು
		 ಇಪ್ಪತ್ತೊಂಬತ್ತು
		30 ಮೂವತ್ತು

@KTBS
NOT TO BE REPUBLISHED

21 ರಿಂದ 30 ರವರೆಗೆ ಬರೆಯಿರಿ











21				25					
		23							30
	22					27			

ಹೂವುಗಳ ಸಂಖ್ಯೆ ಮತ್ತು ಬೇವಿನ ಕಡ್ಡಿಗಳ ಸಂಖ್ಯೆಯನ್ನು ಎಣಿಸೋಣ.















ಸಂಖ್ಯೆ 31 ರಿಂದ 50

	**31** ಮೂವತ್ತೊಂದು		**36** ಮೂವತ್ತಾರು
	**32** ಮೂವತ್ತೆರಡು		☐ ಮೂವತ್ತೇಳು
	☐ ಮೂವತ್ತೂರು		☐ ಮೂವತ್ತೆಂಟು
	☐ ಮೂವತ್ನಾಲ್ಕು		**39** ಮೂವತ್ತೊಂಬತ್ತು
	**35** ಮೂವತ್ತೈದು		**40** ನಲವತ್ತು


@KTBS NOT TO BE REPUBLISHED


	41 ನಲವತ್ತೊಂದು		46 ನಲವತ್ತಾರು
	_____ ನಲವತ್ತೆರಡು		_____ ನಲವತ್ತೇಳು
	43 ನಲವತ್ಮೂರು		_____ ನಲವತ್ತೆಂಟು
	_____ ನಲವತ್ನಾಲ್ಕು		49 ನಲವತ್ತೊಂಬತ್ತು
	45 ನಲವತ್ತೈದು		50 ಐವತ್ತು



ನಾವು ಮಾಡೋಣ


1. 1 ರಿಂದ 50 ರವರೆಗಿನ ಯಾವುದಾದರೂ ಒಂದು ಸಂಖ್ಯಾ ಕಾರ್ಡ್‌ನ್ನು ತೆಗೆದುಕೊಳ್ಳಿ. ಸಂಖ್ಯಾ ಕಾರ್ಡ್‌ನ್ನು ಕ್ಲಿಪ್‌ನ ಸಹಾಯದಿಂದ ಮಣಿ ಹಾರದ ಮೇಲೆ ಸರಿಯಾದ ಸ್ಥಾನದಲ್ಲಿ ಇಡಬಲ್ಲಿರಾ?
2. ಮಣಿ ಹಾರದ ಮೇಲೆ ಇಟ್ಟ ಸಂಖ್ಯಾಕಾರ್ಡ್‌ಗಳ ಸಂಖ್ಯೆಯನ್ನು ಬರೆಯಿರಿ.






©KTBS NOT TO BE REPUBLISHED

ಸಂಖ್ಯೆಗಳನ್ನು ಎಣಿಸಿ ಬರೆಯಿರಿ.








ಸಂಖ್ಯೆಗಳನ್ನು ತೋರಿಸಲು ಹತ್ತರ ಚೌಕಟ್ಟುಗಳನ್ನು ತುಂಬಿ. ಒಂದನ್ನು ನಿಮಗಾಗಿ ಮಾಡಲಾಗಿದೆ.


29
ಇಪ್ಪತ್ತೊಂಬತ್ತು



41
ನಲವತ್ತೊಂದು



30
ಮೂವತ್ತು




@KTBS NOT TO BE REPUBLISHED

ಹತ್ತುಗಳು ಮತ್ತು 21ರಿಂದ 50ರ ವರೆಗಿನ ಸಂಖ್ಯೆಗಳ ಬಗ್ಗೆ ಮಾತನಾಡಲು ಮಣಿಹಾರವನ್ನು ಬಳಸಿ. ಆರಂಭದಲ್ಲಿ ಮಣಿ ಹಾರ ಅಥವಾ ಸಂಖ್ಯಾ ರೇಖೆ ಉಪಯೋಗಿಸಿ ಯಾವುದೇ ದತ್ತ ಸಂಖ್ಯೆಯಿಂದ ಹಿಂದಕ್ಕೆ ಎಣಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಒಮ್ಮೆ ಅವರು ಆತ್ಮವಿಶ್ವಾಸ ಪಡೆದುಕೊಂಡರೆ ಮಣಿಹಾರ ಇಲ್ಲದೆ ಇದನ್ನು ಮಾಡಬಹುದು.



ಬಿಟ್ಟು ಹೋಗಿರುವ ಸಂಖ್ಯೆಗಳನ್ನು ತುಂಬಿರಿ.






ಯೋಜನಾ ಕಾರ್ಯ

ತನ್ನ ಬೆಂಕಿ ಪೆಟ್ಟಿಗೆಯಲ್ಲಿ ಐವತ್ತು ವಿಸ್ಮಯಕಾರಿ ವಸ್ತುಗಳನ್ನು ತುಂಬಿಸಿದ್ದೇನೆ ಎಂದು ಫರ್ಹಾ ಹೇಳಿದಳು. ಅವಳ ಸಹಪಾಠಿಗಳು ಆ ವಸ್ತುಗಳು ಏನಿರಬಹುದು ಎಂದು ಅಚ್ಚರಿಗೊಂಡರು. ಪೆಟ್ಟಿಗೆಯನ್ನು ತೆರೆದಾಗ ಅವರಿಗೆ ದೊಡ್ಡ ಅಚ್ಚರಿಯಾಯಿತು.

ನೀವು ಕೆಲವು ವಸ್ತುಗಳನ್ನು ಸಂಗ್ರಹಿಸಬಹುದೆ? ಒಂದು ಬೆಂಕಿಪೆಟ್ಟಿಗೆಯಲ್ಲಿ ಅವುಗಳು ಎಷ್ಟು ಹಿಡಿಸಬಹುದು ಎಂಬುದನ್ನು ನೋಡಿ.
















@KSEEBS NOT TO BE REPUBLISHED

51 ರಿಂದ 99 ರವರೆಗಿನ ಸಂಖ್ಯೆಗಳು

ಅಂಕಿತ ತನ್ನ ಮನೆಯಲ್ಲಿ ಕನ್ನಡಿಗಳನ್ನು ಅಂಟಿಸುತ್ತಿದ್ದಾಳೆ. ವಿನ್ಯಾಸದಲ್ಲಿ ಎಷ್ಟು ಕನ್ನಡಿಗಳನ್ನು ಅವಳು ಬಳಸಿದಳು ಎಂದು ಕಂಡುಹಿಡಿಯಲು ಅವಳಿಗೆ ಸಹಾಯ ಮಾಡಿ. ☐























51 ರಿಂದ 60ರವರೆಗಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

	51 ಐವತ್ತೊಂದು		☐ ಐವತ್ತಾರು
	52 ಐವತ್ತೆರಡು		☐ ಐವತ್ತೇಳು
	☐ ಐವತ್ಮೂರು		☐ ಐವತ್ತೆಂಟು
	☐ ಐವತ್ತನಾಲ್ಕು		59 ಐವತ್ತೊಂಬತ್ತು
	☐ ಐವತ್ತೈದು		60 ಅರವತ್ತು





















©KTBS NOT TO BE REPUBLISHED

61 ರಿಂದ 80 ರವರೆಗಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

	61 ಅರವತ್ತೊಂದು		71 ಎಪ್ಪತ್ತೊಂದು
	62 ಅರವತ್ತೆರಡು		72 ಎಪ್ಪತ್ತೆರಡು
	____ ಅರವತ್ಮೂರು		____ ಎಪ್ಪತ್ಮೂರು
	____ ಅರವತ್ನಾಲ್ಕು		74 ಎಪ್ಪನಾಲ್ಕು
	____ ಅರವತ್ತೈದು		75 ಎಪ್ಪತ್ತೈದು
	____ ಅರವತ್ತಾರು		____ ಎಪ್ಪತ್ತಾರು
	____ ಅರವತ್ತೇಳು		____ ಎಪ್ಪತ್ತೇಳು
	____ ಅರವತ್ತೆಂಟು		78 ಎಪ್ಪತ್ತೆಂಟು
	____ ಅರವತ್ತೊಂಬತ್ತು		____ ಎಪ್ಪತ್ತೊಂಬತ್ತು
	70 ಎಪ್ಪತ್ತು		80 ಎಂಬತ್ತು

NOT TO BE REPUBLISHED @KTBS

81 ರಿಂದ 100 ರವರೆಗಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

	81 ಎಂಬತ್ತೊಂದು		91 ತೊಂಬತ್ತೊಂದು
	ಎಂಬತ್ತೆರಡು		ತೊಂಬತ್ತೆರಡು
	83 ಎಂಬತ್ಮೂರು		ತೊಂಬತ್ಮೂರು
	ಎಂಬತ್ನಾಲ್ಕು		ತೊಂಬತ್ನಾಲ್ಕು
	ಎಂಬತ್ತೈದು		95 ತೊಂಬತ್ತೈದು
	86 ಎಂಬತ್ತಾರು		ತೊಂಬತ್ತಾರು
	ಎಂಬತ್ತೇಳು		97 ತೊಂಬತ್ತೇಳು
	ಎಂಬತ್ತೆಂಟು		ತೊಂಬತ್ತೆಂಟು
	89 ಎಂಬತ್ತೊಂಬತ್ತು		ತೊಂಬತ್ತೊಂಬತ್ತು
	90 ತೊಂಬತ್ತು		100 ನೂರು

@KTBS NOT TO BE REPUBLISHED



ನಾವು ಮಾಡೋಣ

ಒಂದು ಮಣಿ ಹಾರವನ್ನು ಒಂದು ತುದಿಯಿಂದ ಇನ್ನೊಂದು ತುದಿಗೆ ಕಟ್ಟಿರಿ. ಯಾದೃಚ್ಛಿಕವಾಗಿ ಒಂದು ಸಂಖ್ಯೆ (1 ರಿಂದ 99)ಯನ್ನು ಆರಿಸಿ. ಕ್ಲಿಪ್‌ನ ಸಹಾಯದಿಂದ ಸಂಖ್ಯಾಕಾರ್ಡ್‌ನ್ನು ಮಣಿ ಹಾರದ ಮೇಲೆ ಸೂಕ್ತ ಜಾಗದಲ್ಲಿ ಲಗತ್ತಿಸಿ. ನಿಮ್ಮ ಸಹಪಾಠಿಗಳೊಂದಿಗೆ ಉಳಿದ ಕಾರ್ಡ್‌ಗಳನ್ನು ಬಳಸಿ ಆಟವಾಡಿ.





@KTBS
NOT TO BE REPUBLISHED


ಸಂಖ್ಯೆಗಳನ್ನು ಕೂಡಲು ಮಣಿಹಾರವನ್ನು ಉಪಯೋಗಿಸಿ ಕೊಟ್ಟಿರುವ ಯಾವುದೇ ಎರಡು ಸಂಖ್ಯೆಗಳ ನಡುವಿನ ಸಂಖ್ಯೆಗಳ ಬಗ್ಗೆ ಕೇಳಿ.



ಸಂಖ್ಯೆಗಳನ್ನು ಎಣಿಸಿ ಬರೆಯಿರಿ.







ಬಿಟ್ಟು ಹೋದ ಸಂಖ್ಯೆಗಳನ್ನು ತುಂಬಿ ಜಾರು ಮತ್ತು ಏಣಿ ಆಟವನ್ನು ಮಾಡಿ.

100		98	97	96	95			92	
81	82	83	84		86	87	88		90
80	79		77	76		74	73	72	71
61	62	63		65	66		68	69	
	59	58		56		54	53	52	51
41	42	43		45			48		50
40		38	37	36		34	33	32	31
21	22		24	25		27	28		30
20	19	18	17	16	15		13	12	11
1	2	3		5	6		8	9	

NOT TO BE REPUBLISHED @KTBS

ಈ ಆಟವನ್ನು ಹೊರಾಂಗಣದಲ್ಲಿ ಆಡಬಹುದು. (ಸೀಮೆ ಸುಣ್ಣದಿಂದ ಚೌಕಗಳನ್ನು ಹಾಕಿ ಚಲಿಸಬಲ್ಲ ಕಡ್ಡಿಗಳು ಹಾಗೂ ಹಗ್ಗಗಳನ್ನು ಏಣಿ ಮತ್ತು ಜಾರುಗಳಾಗಿ ಬಳಸುವುದು) ಗುರಿಯನ್ನು ಸೂಚಿಸುವ ಕಾರ್ಡ್‌ಗಳನ್ನು ಚೌಕಗಳಲ್ಲಿ ಇಡಬೇಕು. ಅಂಕಿಗಳು ಅದಲುಬದಲಾಗಿರುವ ಸಂಖ್ಯೆಗೆ ಜಿಗಿ, ಒಂದು ಸಂಖ್ಯೆಯನ್ನು ನಿಮ್ಮ ಬಲ ಬದಿಯಲ್ಲಿ ಬಿಟ್ಟು ಜಿಗಿ ಮುಂತಾದ ಸೂಚನೆಗಳನ್ನು ಬದಲಾಯಿಸಬಹುದು.



ಚಿತ್ರವನ್ನು ಗಮನಿಸಿ



@KTBS NOT TO BE REPUBLISHED



ನಾವು ಮಾತಾಡೋಣ

1. ಚಿತ್ರದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಗಮನಿಸಿ ಮತ್ತು ಚರ್ಚಿಸಿ.
2. ಕೊಟ್ಟಿರುವ ಚಿತ್ರದಲ್ಲಿ ನೀವು ನೋಡುವ ವಿಭಿನ್ನ ವಸ್ತುಗಳು ಯಾವುವು?
3. ಅಲ್ಲಿ ಎಷ್ಟು ಮನೆಗಳಿವೆ?
4. ಚಿತ್ರದಲ್ಲಿ ಎಷ್ಟು ಜನರಿದ್ದಾರೆ?
5. ಮರವೊಂದರ ಎಲೆಗಳನ್ನು ಚಿತ್ರಿಸಲು ಎಷ್ಟು ಗೆರೆಗಳನ್ನು ಬಳಸಲಾಗಿದೆ ಎಂದು ಊಹಿಸಿ.
6. ಈ ರೀತಿಯ ಚಿತ್ರಕಲೆಗಿರುವ ವಿಶೇಷ ಹೆಸರು ನಿಮಗೆ ತಿಳಿದಿದೆಯೆ?
7. ಭಾರತದ ಯಾವ ಭಾಗವು 'ವರ್ಲಿ' ಚಿತ್ರಕಲೆಗೆ ಪ್ರಸಿದ್ಧವಾಗಿದೆ?

ನಿಮ್ಮದೇ ವರ್ಲಿ ಚಿತ್ರವನ್ನು ಮಾಡಿ.







@KTBS
NOT TO BE REPUBLISHED



9

ಉತ್ಸವ

U9S3H1



© KTBS NOT TO BE REPUBLISHED

ಭಾರತೀಯ ಕ್ಯಾಲೆಂಡರ್ ಪ್ರಕಾರ ಉತ್ತರಾಯಣದ ಹಬ್ಬಗಳಾದ ಮಕರ ಸಂಕ್ರಾಂತಿ, ಪೊಂಗಲ್, ಬಿಹು ಮತ್ತು ಲೋಹ್ರಿ ಚಳಿಗಾಲದಿಂದ ಬೇಸಿಗೆಗೆ ಪರಿವರ್ತನೆಯ ಆರಂಭವನ್ನು ಸೂಚಿಸುತ್ತವೆ. ಈ ಆಚರಣೆಗಳು ಬಿಸಿಲಿನ ದಿನಗಳ ಮರಳುವಿಕೆ ಮತ್ತು ಸುಗ್ಗಿಯ ಋತುವಿನ ಆರಂಭವನ್ನು ಸೂಚಿಸುತ್ತವೆ. ಮಕ್ಕಳು ತಮ್ಮ ಕುಟುಂಬಗಳಲ್ಲಿ ಆಚರಿಸುವ ವಿವಿಧ ಸ್ಥಳೀಯ ಹಬ್ಬಗಳ ಬಗ್ಗೆ ಚರ್ಚಿಸಿ. ಚಿತ್ರವು ಪ್ರತಿ ಆಚರಣೆಯ ಮುಖ್ಯ ಅಂಶಗಳನ್ನು ಹಾಗೂ ವಿವಿಧ ಆಕಾರಗಳು ಮತ್ತು ವಿನ್ಯಾಸಗಳನ್ನು ಎತ್ತಿ ತೋರಿಸುತ್ತಿದೆ (highlights) ಇವುಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಬಹುದು.




©KTBS NOT TO BE REPUBLISHED


ಇನ್ನಷ್ಟು ಚಿತ್ರಿಸುವುದರ ಮೂಲಕ ವಿನ್ಯಾಸಗಳನ್ನು ಮುಂದುವರೆಸಿ.


A. 


B. 


C. 

D. 

E. 

F. 

G. 

H. 

ಮಕ್ಕಳ ವಿನ್ಯಾಸಗಳನ್ನು ಮಾಡಲು ಮೂರ್ತ (ಭೌತಿಕ) ವಸ್ತುಗಳನ್ನು ಬಳಸುವಂತೆ ಉತ್ತೇಜಿಸಿ.




@KTBS NOT TO BE REPUBLISHED


ನಾವು ಮಾಡೋಣ




ಮುನ್ನಾ ಬಣ್ಣ ಹಚ್ಚುವುದನ್ನು ತುಂಬಾ ಇಷ್ಟಪಡುತ್ತಾನೆ. ಅವನು ತನ್ನ ಹೆಬ್ಬೆಟ್ಟು ಮತ್ತು ಬೆರಳುಗಳ ಗುರುತನ್ನು ಬಳಸಿ ವಿನ್ಯಾಸವೊಂದನ್ನು ರಚಿಸಿದನು. ಇದರಂತೆಯೇ ನಿಮ್ಮ ಬೆರಳಚ್ಚು ಬಳಸಿಯೂ ಕೊಟ್ಟಿರುವ ಸ್ಥಳದಲ್ಲಿ ಒಂದು ವಿನ್ಯಾಸವನ್ನು ರಚಿಸಬಹುದು.













@KTBS NOT TO BE REPUBLISHED




ಗುಲಾಬಿ ಬಣ್ಣದ ನಂತರ ಯಾವ ಬಣ್ಣ ಬರಬೇಕು ಮತ್ತು ಏಕೆ? ಚರ್ಚಿಸಿ.


ಹಿರಿಯರ ಸಹಾಯದಿಂದ ವಿವಿಧ ತರಕಾರಿಗಳನ್ನು ಸಂಗ್ರಹಿಸಿ ಅವುಗಳನ್ನು ಕತ್ತರಿಸಲು ಹೇಳಿ, ಕತ್ತರಿಸಿದ ಈ ತರಕಾರಿಗಳ ತುಂಡುಗಳಿಂದ ತಮ್ಮದೇ ಆಯ್ಕೆಯ ವಿನ್ಯಾಸವನ್ನು ರಚಿಸಲು ತಿಳಿಸಿ.



ವಿನ್ಯಾಸಗಳನ್ನು ಗಮನಿಸಿ ಮತ್ತು ಬಣ್ಣ ಹಚ್ಚುವುದರಿಂದ ಅವುಗಳನ್ನು ಮುಂದುವರೆಸಿ.





ವಿನ್ಯಾಸ ಪೂರ್ಣಗೊಳಿಸಿ.





@KTBS NOT TO BE REPUBLISHED


ವಿನ್ಯಾಸ ಅಭ್ಯಸಿಸಿ ಬಿಟ್ಟುಹೋದ ಸಂಖ್ಯೆಗಳನ್ನು ತುಂಬಿ.














© KSEEBS
NOT TO BE REPUBLISHED

ಮೂರ್ತಿ ಮತ್ತು ವಾಣಿ ತಮ್ಮ ತಾಯಿಗೆ ಕೊಲಮ್ ಅಥವಾ ರಂಗೋಲಿ ಮಾಡಲು ಸಹಾಯ ಮಾಡುತ್ತಿದ್ದಾರೆ. ನೀವೂ ಸಹ ಮುಂದಿನ ಕೊಲಮ್ ಪೂರ್ಣಗೊಳಿಸುವುದರಿಂದ ಅವರಿಗೆ ಸಹಾಯ ಮಾಡಬಹುದು.



@KTBS
NOT TO BE REPUBLISHED

ನಮ್ಮ ಸುತ್ತಲಿನ ಪ್ರಪಂಚವು ಆಕಾರಗಳಿಂದ ತುಂಬಿದೆ. ಮಕ್ಕಳನ್ನು ತಮ್ಮ ಸುತ್ತಮುತ್ತಲಿನ ದೇವಾಲಯಗಳು ಮಸೀದಿ, ಚರ್ಚ್, ಗುರುದ್ವಾರ ಮತ್ತು ಸ್ಮಾರಕಗಳಲ್ಲಿ ಕಾಣುವ ಸುಂದರ ವಿನ್ಯಾಸಗಳನ್ನು ಅನ್ವೇಷಿಸುವ ಮೂಲಕ ಭಾರತೀಯ ಶ್ರೀಮಂತ ಪರಂಪರೆಯನ್ನು ಮೆಚ್ಚುವಂತೆ ಪ್ರೋತ್ಸಾಹಿಸಿ. ಅಲ್ಲದೆ ವಿಭಿನ್ನ ಕಲೆಗಳಲ್ಲಿ ಕಂಡುಬರುವ ವಿನ್ಯಾಸಗಳು, ನೃತ್ಯರೂಪಗಳಲ್ಲಿರುವ ಚಲನೆಯ ವಿನ್ಯಾಸಗಳು ಇತ್ಯಾದಿಗಳ ಬಗ್ಗೆ ತಾವು ಗಮನಿಸಿದ ಅಂಶಗಳನ್ನು ಹಂಚಿಕೊಳ್ಳುವಂತೆ ಮಕ್ಕಳಿಗೆ ತಿಳಿಸಿ.





ಯೋಜನಾ ಕಾರ್ಯ

1. ಕಲ್ಲುಗಳು, ಹೂವುಗಳು, ಎಲೆಗಳು, ಲೋಟಗಳು, ತಟ್ಟೆಗಳು, ಕಡ್ಡಿಗಳು, ಬಳೆಗಳು, ನಾಣ್ಯಗಳು, ಟೋಪಿಗಳು, ಇತ್ಯಾದಿಗಳನ್ನು ಸಂಗ್ರಹಿಸಿ ಮತ್ತು ಅವುಗಳನ್ನು ಒಂದು ವಿನ್ಯಾಸದಲ್ಲಿ ಜೋಡಿಸಿ. ವಿವಿಧ ಆಭರಣ ವಿನ್ಯಾಸಗಳು, ಅಲಂಕಾರಿಕ ಹೂದಾನಿಗಳು, ಕಲಾತ್ಮಕ ಚಿತ್ರಗಳು ಇತ್ಯಾದಿಗಳನ್ನು ರಚಿಸಿ.

2. ಪ್ರಕೃತಿಯಲ್ಲಿ ಎಲೆಗಳು, ಚಿಟ್ಟೆ, ಪ್ರಾಣಿಗಳ ಚರ್ಮ (ಬೆಕ್ಕು, ನಾಯಿ, ಜೀಬ್ರಾ, ಹುಲಿ) ಕರ್ಟನ್‌ಗಳು, ಸೀರೆಗಳು, ದುಪ್ಪಟ್ಟಾಗಳು, ಟೈಲ್ಸ್, ಜೇನುಗೂಡುಗಳು ಮುಂತಾದವುಗಳನ್ನು ಗಮನಿಸಿ ವಿನ್ಯಾಸಗಳನ್ನು ಕಂಡುಹಿಡಿಯಿರಿ.

3. ನಿಮ್ಮ ಸುತ್ತಲಿನ ವಸ್ತುಗಳನ್ನು ಸಂಗ್ರಹಿಸಿ ಮತ್ತು ಕೊಲಾಜ್ ಮಾಡಿ.

4. ಚಪ್ಪಾಳೆ ತಟ್ಟುವುದು, ಬೆರಳುಗಳನ್ನು ಹೆಣೆಯುವುದು, ಪಾದಗಳನ್ನು ಮುದ್ರೆಯೊತ್ತುವುದು ಇತ್ಯಾದಿಗಳಿಂದ ವಿನ್ಯಾಸಗಳನ್ನು ಸೃಜಿಸಿ.

@KTBS
NOT TO BE REPUBLISHED




10 ನಾನು ನನ್ನ ದಿನವನ್ನು ಹೇಗೆ ಕಳೆಯುವೆ?

Q3X1Q7



ಹಲೋ ಸ್ನೇಹಿತರೇ, ನಾನು ಪಿಹು. ನನ್ನ ವಯಸ್ಸು 6 ವರ್ಷ. ಇಂದು ಬೆಳಗ್ಗಿನಿಂದ ರಾತ್ರಿಯವರೆಗೆ ನಾನು ಏನು ಮಾಡುವೆ ಎಂದು ನನ್ನ ದೈನಂದಿನ ದಿನಚರಿಯನ್ನು ಹಂಚಿಕೊಳ್ಳುವೆ.

ನೋಡು, ಆಗಸದಲ್ಲಿ ಸೂರ್ಯನು ಉದಯಿಸುತ್ತಿದ್ದಾನೆ. ಇದು ಮುಂಜಾನೆ.





ನಾನು ಬೆಳಿಗ್ಗೆ ಹಾಸಿಗೆಯಿಂದ ಏಳುತ್ತೇನೆ ಮತ್ತು ಒಂದು ಲೋಟ ಬೆಚ್ಚಗಿನ ನೀರನ್ನು ಕುಡಿಯುತ್ತೇನೆ.

ಯೋಗ ಅಥವಾ ವ್ಯಾಯಾಮದಿಂದ ನನ್ನ ದಿನ ಆರಂಭವಾಗುತ್ತದೆ.






ನಂತರ, ನಾನು ಹಲ್ಲು ಉಜ್ಜಿ ಸ್ನಾನ ಮಾಡುತ್ತೇನೆ.

@KTBS NOT TO BE REPUBLISHED


ನಾನು ಬೆಳಗಿನ ಉಪಾಹಾರ ಸೇವಿಸಿ ಶಾಲೆಗೆ ಹೋಗಲು ತಯಾರಾಗುತ್ತೇನೆ.






ನಾನು ಶಾಲೆಯಲ್ಲಿ ನನ್ನ ಸಹಪಾಠಿಗಳೊಂದಿಗೆ ಅಭ್ಯಾಸ ಮಾಡುವೆನು ಮತ್ತು ಆಟವಾಡುವೆನು.






ಸೂರ್ಯ ನೆತ್ತಿ ಮೇಲೆ ಆಗಸದಲ್ಲಿ ಇದ್ದಾನೆ. ಇದು ಮಧ್ಯಾಹ್ನದ ಸಮಯ. ನಾನು ಕೈಗಳನ್ನು ತೊಳೆದುಕೊಂಡು ನನ್ನ ಸಹಪಾಠಿಗಳೊಂದಿಗೆ ಊಟ ಮಾಡುವೆ.

ನಾನು ಶಾಲೆಯಿಂದ ಮನೆಗೆ ಬರುವೆ ಮತ್ತು ಸ್ವಲ್ಪ ಸಮಯ ವಿಶ್ರಾಂತಿ ತೆಗೆದುಕೊಳ್ಳುವೆ.








ನೋಡಿ, ಸೂರ್ಯ ಮುಳುಗುತ್ತಿದ್ದಾನೆ. ಇದು ಸಂಜೆ ಸಮಯ. ನಾನು ನನ್ನ ಸ್ನೇಹಿತರ ಜೊತೆ ಆಟವಾಡಿ ನಂತರ ಅಧ್ಯಯನ ಮಾಡುವೆ.

@KTBS NOT TO BE REPUBLISHED

ನೋಡಿ ಅಲ್ಲಿ, ಚಂದ್ರ ಮತ್ತು ನಕ್ಷತ್ರಗಳು ಆಗಸದಲ್ಲಿ ಕಾಣುತ್ತಿವೆ. ಇದು ರಾತ್ರಿಯ ಸಮಯ.





ನಾನು ನನ್ನ ಕುಟುಂಬದ ಜೊತೆ ಊಟ ಮಾಡುವೆ.

ನಾನು ಕಥೆ ಪುಸ್ತಕವೊಂದನ್ನು ಓದುವೆನು ಮತ್ತು ರಾತ್ರಿ ನಿದ್ದೆ ಮಾಡುವೆನು.



@KTBS NOT TO BE REPUBLISHED



ನಾವು ಮಾತಾಡೋಣ

1. ನಿಮ್ಮ ದೈನಂದಿನ ದಿನಚರಿಯೇನು?
2. ನೀವು ಯಾವಾಗ ಹಲ್ಲು ಉಜ್ಜುವಿರಿ?
3. ನೀವು ಯಾವಾಗ ಸ್ನಾನ ಮಾಡುವಿರಿ?



ನಾವು ಮಾಡೋಣ

1. ನೀವು ಮುಂಜಾನೆ ಮಾಡುವ ಕಾರ್ಯಗಳನ್ನು ಟಿಕ್ ✓ ಮಾಡಿ.






2. ದಿನದಲ್ಲಿ ನೀವು ಮಾಡುವ ಅಥವಾ ನೋಡುವ ಚಟುವಟಿಕೆಗಳನ್ನು ಟಿಕ್ ✓ ಮಾಡಿ.







3. ರಾತ್ರಿಯಲ್ಲಿ ನೀವು ಮಾಡುವ ಚಟುವಟಿಕೆಗಳನ್ನು ಟಿಕ್ ✓ ಮಾಡಿ.








NOT TO BE REPUBLISHED © KTBS

ಚಿತ್ರವನ್ನು ಗಮನಿಸಿ ದಿನದ ಸಮಯವನ್ನು ಊಹಿಸಿ. ಆ ಸಮಯದಲ್ಲಿ ನೀವು ಏನು ಮಾಡುವಿರಿ ಎಂಬುದನ್ನು ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ.











ನಾವು ಮಾಡೋಣ


ಸಾಮಾನ್ಯವಾಗಿ ಹೆಚ್ಚು ಸಮಯ ತೆಗೆದುಕೊಳ್ಳುವ ಚಟುವಟಿಕೆಗೆ ಬಣ್ಣ ಹಚ್ಚಿ.

A.






B.





@KTBS NOT TO BE REPUBLISHED

ಋತುಗಳು / ಕಾಲಗಳು



ಬೇಸಿಗೆ ಕಾಲ



ವಸಂತ ಕಾಲ



ಮಳೆಗಾಲ



ಚಳಿಗಾಲ


@KTBS NOT TO BE REPUBLISHED

ಮೇಲೆ ನೀಡಿರುವ ಚಿತ್ರಗಳನ್ನು ಗಮನಿಸಿ. ಬೇಸಿಗೆ ಕಾಲ, ಚಳಿಗಾಲ, ವಸಂತ ಕಾಲ ಮತ್ತು ಮಳೆಗಾಲಗಳ ವ್ಯತ್ಯಾಸಗಳನ್ನು ಚರ್ಚಿಸಿ.

ವಸ್ತುಗಳನ್ನು ಕಾಲಗಳೊಂದಿಗೆ ಹೋಲಿಸಿ.

ಮಳೆಗಾಲ

ವಸಂತ ಕಾಲ



ಬೇಸಿಗೆ ಕಾಲ

ಚಳಿಗಾಲ



ನಾವು ಮಾತನಾಡೋಣ

1. ಬೇಸಿಗೆ ಕಾಲದಲ್ಲಿ ನೀವು ಏನನ್ನು ತಿನ್ನಲು ಬಯಸುವಿರಿ?
2. ಚಳಿಗಾಲದಲ್ಲಿ ನೀವು ಏನನ್ನು ಧರಿಸಲು ಬಯಸುವಿರಿ?



ನಾವು ಮಾಡೋಣ

ಋತುಗಳ ಹೆಸರು ಬರೆಯಿರಿ ಮತ್ತು ಚಿತ್ರಗಳೊಂದಿಗೆ ಹೊಂದಿಸಿ.





















© KTBS NOT TO BE REPUBLISHED



ಯೋಜನಾ ಕಾರ್ಯ

ಬೇರೆ ಬೇರೆ ಕಾಲಗಳಲ್ಲಿ ತಮ್ಮ ಇಷ್ಟವಾದ ತಿನಿಸುಗಳ ಮತ್ತು ಈ ಕಾಲಗಳಲ್ಲಿ ಆಚರಿಸುವ ಸ್ಥಳೀಯ ಹಬ್ಬಗಳ ಚಿತ್ರಗಳನ್ನು ಚಿತ್ರಿಸಲು ಅಥವಾ ಚಿತ್ರಗಳನ್ನು ಅಂಟಿಸಲು ಮಕ್ಕಳಿಗೆ ತಿಳಿಸಿ.

11 ಎಷ್ಟು ಸಲ?

ಮನರಂಜನಾ ಉದ್ಯಾನವನಕ್ಕೆ ಭೇಟಿ

ಮಕ್ಕಳ ಗುಂಪೊಂದು ಮನರಂಜನಾ ಉದ್ಯಾನವನಕ್ಕೆ ಭೇಟಿ ನೀಡಿತು.



ವಾವ್! ನಮ್ಮಲಿಬ್ಬರು ಕುದುರೆ ಮೇಲೆ ಕುಳಿತುಕೊಳ್ಳಬಹುದು. ನಾನು ನನ್ನ ಸ್ನೇಹಿತನ ಜೊತೆ ಕುಳಿತುಕೊಳ್ಳುತ್ತೇನೆ.




ಒಟ್ಟು ಮಕ್ಕಳ ಸಂಖ್ಯೆ

$2 + 2 + 2 + 2 =$ ☐

ನಮ್ಮಲ್ಲಿ ☐ ಜನರು ಕುದುರೆ ಉಯ್ಯಾಲೆಯಲ್ಲಿ ಒಟ್ಟಿಗೆ ಕುಳಿತುಕೊಳ್ಳಬಹುದು.


@KTBS NOT TO BE REPUBLISHED

ನಮ್ಮಲ್ಲಿ 3 ಜನರು ಆಟಿಕೆ ರೈಲಿನಲ್ಲಿ ಕುಳಿತುಕೊಳ್ಳಬಹುದು. ನಾವೆಲ್ಲರೂ ಒಟ್ಟಿಗೆ ಕುಳಿತುಕೊಳ್ಳಬಹುದು.



ಅಲ್ಲಿ 3 ಬೋಗಿಗಳಿವೆ. $3 + 3 + 3 =$ ☐


3 ಬೋಗಿಗಳಲ್ಲಿ ಒಟ್ಟು ☐ ಮಕ್ಕಳು ಕೂರಬಹುದು.



☐ + ☐ + ☐ + ☐ = ☐

ಒಟ್ಟು ☐ ಮಕ್ಕಳು ಉಯ್ಯಾಲೆಯಲ್ಲಿ ಕುಳಿತುಕೊಳ್ಳಬಹುದು.

ಉಯ್ಯಾಲೆ ಸವಾರಿ ನಂತರ ಮಕ್ಕಳು ಜಿಲೇಬಿ ತಿನ್ನಲು ಯೋಜಿಸಿದರು. ಪ್ರತೀ ತಟ್ಟೆಯಲ್ಲಿ 3 ಜಿಲೇಬಿಗಳಿರುತ್ತವೆ. ಅವರು 6 ತಟ್ಟೆ ಜಿಲೇಬಿಗಳನ್ನು ತರಲು ಹೇಳಿದರು.



☐ + ☐ + ☐ + ☐ + ☐ + ☐ = ☐

6 ಸಲ 3 ಎಂದರೆ ☐

ಚಿತ್ರದಲ್ಲಿ ಎಷ್ಟು ಮಕ್ಕಳಿದ್ದಾರೆ, ಪ್ರತಿ ವಿಭಾಗದಲ್ಲಿ ಎಷ್ಟು ಮಕ್ಕಳು ಕುಳಿತಿದ್ದಾರೆ, ಸವಾರಿಯಲ್ಲಿ ಒಟ್ಟು ಎಷ್ಟು ಮಕ್ಕಳಿದ್ದಾರೆ ಇಂತಹ ಪ್ರಶ್ನೆಗಳ ಮೂಲಕ ಪ್ರತಿ ಚಟುವಟಿಕೆಯಲ್ಲಿ ಇರುವ ಗುಂಪುಗಳ ಸಂಖ್ಯೆಯ ಬಗ್ಗೆ ಚರ್ಚಿಸಿ.



© KTBS NOT TO BE REPUBLISHED




ಬಸ್‌ನಲ್ಲಿ ಪ್ರಯಾಣಿಸುತ್ತಿರುವವರು

2 + 2 + 2 + 2 + 2 + 2 + 2 + 2 + 2 = ☐

9 ಬಾರಿ 2 = ☐

ಬಸ್‌ನಲ್ಲಿರುವ ಜನರ ಒಟ್ಟು ಸಂಖ್ಯೆ = ☐

ನೀರಿನ ಬಾಟಲ್‌ಗಳ ಕೆಲವು ಕ್ರೇಟ್‌ಗಳನ್ನು ಬಸ್‌ನಲ್ಲಿ ಇಡಲಾಗಿದೆ. ಅವುಗಳನ್ನು ಎಣಿಸಿ.



☐ + ☐ + ☐ + ☐ = ☐


4 ಬಾರಿ 5 = ☐

ಬಸ್‌ನಲ್ಲಿರುವ ಒಟ್ಟು ಬಾಟಲ್‌ಗಳ ಸಂಖ್ಯೆ = ☐

©KTBS NOT TO BE REPUBLISHED

ಚೀನು ಇರೇಸರ್, ಪೆನ್ಸಿಲ್ ಮತ್ತು ಸೇಬು ಇವುಗಳ ಕೆಲವು ಪ್ಯಾಕ್‌ಗಳನ್ನು ಒಂದು ಅಂಗಡಿಯಿಂದ ಕೊಂಡನು. ಪ್ರತಿ ವಸ್ತುವಿನ ಒಟ್ಟು ಮೊತ್ತವನ್ನು ಕಂಡುಹಿಡಿಯಿರಿ.

1.




2 + ☐ + ☐ + ☐ = ☐ ಇರೇಸರ್‌ಗಳು.

4 ಬಾರಿ 2 = ☐

ಒಟ್ಟು ಇರೇಸರ್‌ಗಳ ಸಂಖ್ಯೆ = ☐

2.



3 + ☐ + ☐ + ☐ + ☐ = ☐ ಪೆನ್ಸಿಲ್‌ಗಳು

5 ಬಾರಿ 3 = ☐

ಒಟ್ಟು ಪೆನ್ಸಿಲ್‌ಗಳ ಸಂಖ್ಯೆ = ☐


3.



3 + ☐ + ☐ = ☐ ಸೇಬುಗಳು

3 ಬಾರಿ 3 = ☐

ಒಟ್ಟು ಸೇಬುಗಳ ಸಂಖ್ಯೆ = ☐





ಯೋಜನಾ ಕಾರ್ಯ

ಸೈಕಲ್ ಚಕ್ರದ ಚಿತ್ರ ಬರೆಯಿರಿ. ನಿಮ್ಮ ಸಹಪಾಠಿಗಳನ್ನು ಕೇಳಿ ಅಥವಾ ನಿಮ್ಮ ಮನೆಯಲ್ಲಿ ಎಷ್ಟು ಸೈಕಲ್‌ಗಳಿವೆ ಎಂದು ಕಂಡುಹಿಡಿಯಿರಿ. ಎಲ್ಲಾ ಸೈಕಲ್‌ಗಳಲ್ಲಿರುವ ಚಕ್ರಗಳ ಒಟ್ಟು ಸಂಖ್ಯೆ ಕಂಡುಹಿಡಿಯಿರಿ.

@KTBS NOT TO BE REPUBLISHED

12 ನಾವು ಎಷ್ಟು ಖರ್ಚು ಮಾಡುತ್ತೇವೆ ?

H3L6N4



ರಿಯಾ ₹1, ₹2, ₹5, ₹10 ರ ನಾಣ್ಯಗಳನ್ನು ಎಣಿಸಲು ಆರಂಭಿಸಿದಳು ಮತ್ತು ಸಾಹಿಲ್ ₹20, ₹50 ಮತ್ತು ₹100 ರ ನೋಟುಗಳನ್ನು ಎಣಿಸಲು ಆರಂಭಿಸಿದನು. ಆ ನಾಣ್ಯಗಳು ಮತ್ತು ನೋಟುಗಳನ್ನು ಗಮನಿಸಿ, ಅವುಗಳ ಮುಖ ಬೆಲೆಗಳನ್ನು (ಮೌಲ್ಯಗಳನ್ನು) ಬರೆಯಿರಿ.

			
₹1			
			
₹10			

© KITSS NOT TO BE REPUBLISHED

ರಹೀಮ್ ಮಾಮ – ಆಟಿಕೆ ಮಾರಾಟಗಾರ





ನಾವು ಮಾಡೋಣ

1. ಒಂದು ಚೆಂಡಿನ  ಬೆಲೆ ₹20.

   ರಿಯಾ ಚೆಂಡಿಗೆ ₹5 ರ _____ ನಾಣ್ಯಗಳನ್ನು ಕೊಡುತ್ತಾಳೆ.

   ಸಾಹಿಲ್ ಚೆಂಡಿಗೆ ₹10 ರ _____ ನೋಟುಗಳನ್ನು ಕೊಡುತ್ತಾನೆ.

2. ನೀವು ₹10 ಕ್ಕೆ ಕೊಳ್ಳಬಹುದಾದ ಆಟಿಕೆಗಳನ್ನು ಹೆಸರಿಸಿ.

3. ನೀವು ₹20 ಕ್ಕೆ ಕೊಳ್ಳಬಹುದಾದ ಆಟಿಕೆಗಳನ್ನು ಹೆಸರಿಸಿ.

4. ಒಂದು ಕಾರ್‌ನ ಬೆಲೆ ₹ 14. ರಿಯಾ ಬಳಿ ₹ 10 ಇದ್ದರೆ, ಕಾರ್ ಕೊಳ್ಳಲು ಅವಳಿಗೆ ಇನ್ನೂ ಎಷ್ಟು ಹೆಚ್ಚು ಹಣದ ಅಗತ್ಯ ಇದೆ?

5. ರಿಯಾ ಮತ್ತು ಸಾಹಿಲ್ ಬಳಿ ಒಟ್ಟಾಗಿ ₹30 ಇದೆ. ಅವರು ಕೊಳ್ಳಬಹುದಾದ ಆಟಿಕೆಗಳ ಹೆಸರುಗಳನ್ನು ಬರೆಯಿರಿ.

©KTBS
NOT TO BE REPUBLISHED

ಒಟ್ಟು ಬೆಲೆಯನ್ನು ಕಂಡುಹಿಡಿಯಿರಿ ಮತ್ತು ಸರಿಯಾದ ಆಯ್ಕೆಗೆ ಟಿಕ್ ✓ ಹಾಕಿ.



@KTBS TO BE REPUBLISHED



ನಾವು ಆಡೋಣ

ನಿಮ್ಮದೇ ಕರೆನ್ಸಿ ನೋಟುಗಳನ್ನು ಮತ್ತು ಕಾಗದದ ಹಾಳೆಯ ನಾಣ್ಯಗಳನ್ನು ಮಾಡಿ.
ತರಗತಿ ಕೋಣೆಯಲ್ಲಿ ವ್ಯಾಪಾರ ಮಾಡುವ ಆಟ ಆಡಿ.

@KTBS
NOT TO BE REPUBLISHED

ಕೆಲವು ಮಕ್ಕಳು ಅಂಗಡಿಯವರಾಗಿ ಮತ್ತು ಉಳಿದವರು ಗ್ರಾಹಕರಾಗಿರುತ್ತಾರೆ. ಕಾಗದದ ಹಾಳೆಯಿಂದ ತಯಾರಿಸಿದ ಆಟದ ಹಣವನ್ನು ಬಳಸಿ ಅವರ ವಸ್ತುಗಳನ್ನು ಖರೀದಿಸಲು ಬಿಡಿ. ಆಟದ ಹಣವನ್ನು ವಿವಿಧ ಸಂಯೋಜನೆಗಳಲ್ಲಿ ಬಳಸಲು ಅವರನ್ನು ಪ್ರೋತ್ಸಾಹಿಸಿ.



ಕೊಟ್ಟಿರುವ ಕರೆನ್ಸಿಗಳನ್ನು ಬಳಸಿಕೊಂಡು ವಿವಿಧ ಸಂಯೋಜನೆಗಳಲ್ಲಿ ಮೊತ್ತವನ್ನು ಭರ್ತಿ ಮಾಡಿ ಅಥವಾ ರಚಿಸಿ.











₹20

₹10






₹13

₹8

NOT TO BE REPUBLISHED © KTBS

ಒಂದೇ ಮೊತ್ತವನ್ನು ಗೆರೆ ಎಳೆಯುವುದರ ಮೂಲಕ ಹೊಂದಿಸಿ.

A.







B.





C.






@KTBS NOT TO BE REPUBLISHED

ಹಣ ಉಳಿತಾಯ ಮಾಡುವುದು ಒಂದು ಒಳ್ಳೆಯ ಹವ್ಯಾಸ. ಚರ್ಚಿಸಿ.



ಯೋಜನಾ ಕಾರ್ಯ

ನಿಮ್ಮ ಮನೆಯಲ್ಲಿರುವ ಪೆಟ್ಟಿಗೆಯಿಂದ ನಿಮ್ಮದೇ ಗೋಲಕವನ್ನು ಹಿರಿಯರು ಅಥವಾ ಒಡಹುಟ್ಟಿದವರ ಸಹಾಯದಿಂದ ಮಾಡಲು ಪ್ರಯತ್ನಿಸಿ.



ದತ್ತ ಮೊತ್ತಕ್ಕೆ ಆಟದ ಹಣವನ್ನು ಉಪಯೋಗಿಸಿ ವಿವಿಧ ಸಂಯೋಜನೆಗಳನ್ನು ರೂಪಿಸಲು ಮಕ್ಕಳಿಗೆ ತಿಳಿಸಿ.



13 ಎಷ್ಟೊಂದು ಆಟಿಕೆಗಳು

I7Y2T5

ಚಿತ್ರವನ್ನು ಗಮನಿಸಿ ವಿವಿಧ ಆಟಿಕೆಗಳ ಸಂಖ್ಯೆ ಕಂಡುಹಿಡಿಯಿರಿ.



ಆನೆಗಳು  ☐

ಟೆಡ್ಡಿ ಬೇರ್‌ಗಳು  ☐

ಕಾರ್‌ಗಳು  ☐

ಗೊಂಬೆಗಳು  ☐

NOT TO BE REPUBLISHED © KTBS

ಮುಂದಿನ ವಾಕ್ಯಗಳನ್ನು **ಹೆಚ್ಚು/ಕಡಿಮೆ/ಸಮ** ಬಳಸಿ ಪೂರ್ಣಗೊಳಿಸಿ.

1. ಗೊಂಬೆಗಳ  ಸಂಖ್ಯೆ ಕಾರ್  ಗಳ ಸಂಖ್ಯೆಗಿಂತ _____ ಇದೆ.
2. ಆನೆಗಳ  ಸಂಖ್ಯೆಯು ಗೊಂಬೆ  ಗಳ ಸಂಖ್ಯೆಗಿಂತ _____ ಇದೆ.

3. ಟೆಡ್ಡಿ ಬೇರ್  ಗಳ ಸಂಖ್ಯೆಯು ಆನೆ  ಗಳ ಸಂಖ್ಯೆಗಿಂತ _____ ಇದೆ.

4. ಕಾರ್  ಗಳ ಸಂಖ್ಯೆಯು ಟೆಡ್ಡಿ ಬೇರ್  ಗಳ ಸಂಖ್ಯೆಗಿಂತ _____ ಇದೆ.

ವರ್ಣಮಯ ಹೂಗಳು

ತೋಟದಲ್ಲಿ ನೀವು ಹೆಚ್ಚಾಗಿ ನೋಡುವ ಹೂಗಳ ಬಣ್ಣವನ್ನು ಹೆಸರಿಸಿ.

ಬಣ್ಣದ ಹೂಗಳ ಚಿತ್ರವನ್ನು ಗಮನಿಸಿ ಮತ್ತು ಹೂಗಳ ಸಂಖ್ಯೆಯನ್ನು ಬರೆಯಿರಿ.

ನೀಲಿ ಹೂಗಳು  ☐

ಕಿತ್ತಳೆ ಹೂಗಳು  ☐

ಕೆಂಪು ಹೂಗಳು  ☐

ನೇರಳೆ ಹೂಗಳು  ☐

1. ಅತೀ ಕಡಿಮೆ ಸಂಖ್ಯೆಯಲ್ಲಿರುವ ಹೂಗಳ ಬಣ್ಣವನ್ನು ಹೆಸರಿಸಿ.
_____

2. ಅತೀ ಹೆಚ್ಚು ಸಂಖ್ಯೆಯಲ್ಲಿರುವ ಹೂಗಳ ಬಣ್ಣವನ್ನು ಹೆಸರಿಸಿ.
_____

ಸರಿಯೇ ಅಥವಾ ತಪ್ಪೇ?

1. ಕೆಂಪು ಹೂ  ಗಳ ಸಂಖ್ಯೆ ನೀಲಿ ಹೂ  ಗಳ ಸಂಖ್ಯೆಗಿಂತ ಹೆಚ್ಚು. ☐

2. ಕಿತ್ತಳೆ ಹೂ  ಗಳ ಸಂಖ್ಯೆ ನೇರಳೆ ಹೂಗಳ  ಸಂಖ್ಯೆಗಿಂತ ಕಡಿಮೆ. ☐



ಯೋಜನಾ ಕಾರ್ಯ


1. ವರ್ಣರಂಜಿತ ಹೂಗಳ ಫ್ರೇಮ್ ಇರುವ ಒಂದು ಕಾರ್ಡ್ ತಯಾರಿಸಿ.
2. ನಿಮ್ಮ ತರಗತಿಯಲ್ಲಿ ಎಷ್ಟು ಮಕ್ಕಳು ತಮ್ಮ ಹೆಸರಿನಲ್ಲಿ 3 ಅಕ್ಷರಗಳನ್ನು, ಎಷ್ಟು ಮಕ್ಕಳು ತಮ್ಮ ಹೆಸರಿನಲ್ಲಿ ನಾಲ್ಕು ಅಕ್ಷರಗಳನ್ನು, ಮತ್ತು ಎಷ್ಟು ಮಕ್ಕಳು ನಾಲ್ಕು ಅಕ್ಷರಗಳಿಗಿಂತ ಹೆಚ್ಚು ಅಕ್ಷರಗಳನ್ನು ಹೊಂದಿದ್ದಾರೆ ಎಂಬುದನ್ನು ಕಂಡುಹಿಡಿಯಿರಿ.

@KTBS NOT TO BE REPUBLISHED

ಒಗಟುಗಳು

A7M7R2


1. ಮುಂದಿನ ಚಿತ್ರದಲ್ಲಿ ತೋರಿಸಿದಂತೆ ಕೋಪಲ್ ಸಂಖ್ಯಾ ಕಾರ್ಡ್‌ಗಳನ್ನು ಜೋಡಿಸಿದ್ದಾನೆ ಮತ್ತು ಅವುಗಳನ್ನು ಅನಯಾ ಬಟ್ಟಲುಗಳಿಂದ ಮರೆಮಾಡಿದ್ದಾಳೆ. ನೀವು ಆ ಸಂಖ್ಯೆಗಳನ್ನು ಗುರುತಿಸಬಲ್ಲಿರಾ?




ನೀವೂ ಸಹ ಒಂದು ಸಂಖ್ಯಾ ಕಾರ್ಡ್‌ನ ಮೇಲಿನ ಸಂಖ್ಯೆಗಳನ್ನು ನಿಮ್ಮ ಕೈಗಳಿಂದ ಮರೆಮಾಡಿ ನಿಮ್ಮ ಸಹಪಾಠಿಗಳ ಜೊತೆ ಈ ಆಟವನ್ನು ಆಡಬಹುದು.

©KTBS NOT TO BE REPUBLISHED

2. ದಿಮ್ಮಿಗಳ ಸಂಖ್ಯೆಯನ್ನು ಎಣಿಸಿ. ಅವು 3 ದಿಮ್ಮಿಗಳೇ ಅಥವಾ 4 ದಿಮ್ಮಿಗಳೇ?



3. ಜರೀನ ಲೋಟಗಳನ್ನು ಹೀಗೆ ಜೋಡಿಸಿದಳು. ಈ ಜೋಡಣೆಯನ್ನು ಮುಂದುವರಿಸಲು ಅವಳಿಗೆ ಸಹಾಯಮಾಡಿ.



_____ _____


4. 1 ರಿಂದ 10ರವರೆಗಿನ ಸಂಖ್ಯೆಗಳನ್ನು ಕಂಡುಹಿಡಿಯಿರಿ.

e	i	g	h	t	t	s
f	i	v	e	h	t	e
o	t	w	o	r	x	v
u	n	i	n	e	o	e
r	n	t	t	e	n	n
s	i	x	o	w	e	n



© KTBS NOT TO BE REPUBLISHED


5. 1 ರಿಂದ 5 ರವರೆಗಿನ ಸಂಖ್ಯೆಗಳನ್ನು ಕೊಟ್ಟಿರುವ ಚೆಂಡುಗಳಲ್ಲಿ ಎರಡೂ ಬದಿಗಳಲ್ಲಿ ಮೊತ್ತವು ಸಮವಾಗಿರುವಂತೆ ತುಂಬಿ.



6. ಗಿಲ್ಲುನ ಇಷ್ಟವಾದ ಸಂಖ್ಯೆ 8. ಕೇಳಿರುವ ಪ್ರಶ್ನೆಗೆ ಉತ್ತರ 8 ಆದರೆ, ಅವನು ಸಂತೋಷಗೊಳ್ಳುತ್ತಾನೆ, ಇಲ್ಲವಾದರೆ ಅವನು ಬೇಸರಗೊಳ್ಳುತ್ತಾನೆ.
ಉತ್ತರ 8 ಮಾತ್ರ ಬರುವಂತೆ ಗಿಲ್ಲುಗೆ ಕೆಲವು ಪ್ರಶ್ನೆಗಳನ್ನು ಕೇಳಿ.


7. ಯಾವುದೇ ಆಕೃತಿಯು ಅಂಕಣಗಳಲ್ಲಿ ಅಡ್ಡ ಸಾಲಿನಲ್ಲಿ (ಸಮಾಂತರ) ಮತ್ತು ಕಂಬಸಾಲಿನಲ್ಲಿ (ನಿಂತಿರುವುದು) ಒಂದೇ ಬಾರಿ ಕಾಣುವಂತೆ △, □ ಮತ್ತು ○ ಗಳನ್ನು ತುಂಬಿ.







8. 4 ಅಂಗಿ ಗುಂಡಿಗಳು, 4 ಕಲ್ಲುಗಳು, 4 ಬೀಜಗಳು, 4 ಮಣ್ಣಿನ ಚೆಂಡುಗಳು ಇತ್ಯಾದಿ 4 ವಿಭಿನ್ನ ವಸ್ತುಗಳನ್ನು (ಪ್ರತಿ ವಸ್ತು 4 ಮಾತ್ರ) ತೆಗೆದುಕೊಳ್ಳಿ. ಈಗ ಅವುಗಳನ್ನು ಪ್ರತಿ ವಸ್ತುವನ್ನು ಒಂದು ಅಡ್ಡಸಾಲಿನಲ್ಲಿ (ಸಮಾಂತರ) ಮತ್ತು ಕಂಬಸಾಲಿನಲ್ಲಿ (ಲಂಬವಾಗಿ ನಿಂತಿರುವುದು) ಒಂದು ಬಾರಿ ಮಾತ್ರ ಬರುವಂತೆ ಕೊಟ್ಟಿರುವ ಪೆಟ್ಟಿಗೆಗಳಲ್ಲಿ ಇಡಿ.






@KTBS NOT TO BE REPUBLISHED

ಬೇರೆ ಯಾವುದೇ ವಿಧಾನದಲ್ಲಿ ಅವುಗಳನ್ನು ನೀವು ತುಂಬಬಲ್ಲಿರಾ?

9. ನಾನು ಯಾರು? (ಕನ್ನಡಿ ನಿಮಗೆ ಸಹಾಯ ಮಾಡಬಲ್ಲದು.)



10. ನಾನು ಯಾರು?

i. ನಾನು 5 ಮತ್ತು 10 ರ ನಡುವೆ ಇರುವೆನು. ತಲೆಕೆಳಗಾಗಿ ಓದಿದರೆ ನಾನು ಮೂರು ಹೆಚ್ಚಾಗುತ್ತೇನೆ.

ii. ನಾನು 8 ಕ್ಕಿಂತ 3 ಹೆಚ್ಚಾಗಿದ್ದು 14 ಕ್ಕಿಂತ 3 ಕಡಿಮೆ.

iii. ನಾನು 50 ರ ನಂತರ ಮತ್ತು 54 ರ ಮೊದಲಿರುತ್ತೇನೆ. ನನ್ನ ಅಂಕಿಗಳ ಮೊತ್ತ 7.

iv. ನಾನು 40 ಕ್ಕಿಂತ ಸ್ವಲ್ಪ ಮೊದಲಿದ್ದೇನೆ.


v. ನನಗೆ 5 ನ್ನು ಕೂಡಿ, ನೀವು 24 ಪಡೆಯುವಿರಿ.

vi. ನಾನು 35 ರ ನಂತರ ಇದ್ದೇನೆ.


vii. ನನ್ನಿಂದ 8 ಕಡಿಮೆ ಮಾಡಿ, 14 ಉಳಿಯುವುದು.

© KTBS NOT TO BE REPUBLISHED

11. ಸೊನ್ನೆಯನ್ನು ಮಾಡಲು ಆರು ಬೆಂಕಿಕಡ್ಡಿಗಳನ್ನು ಉಪಯೋಗಿಸಲಾಗಿದೆ. ಒಂದೇ ಒಂದು ಕಡ್ಡಿಯನ್ನು ಬದಲಾಯಿಸುವುದರಿಂದ ಬೇರೆ ಸಂಖ್ಯೆಯನ್ನು ಮಾಡಬಲ್ಲಿರಾ?



12. ಬಿಟ್ಟು ಹೋದ ಭಾಗವನ್ನು ಕಂಡುಹಿಡಿಯಿರಿ ಮತ್ತು ಮಡಕೆಯನ್ನು ಪೂರ್ಣಗೊಳಿಸಿ.



13. 25 ರಿಂದ 5 ನ್ನು ಎಷ್ಟು ಬಾರಿ ಕಳೆಯಬಹುದು?

14. ರಾನು ಬಳಿ 3 ಬೀಜಗಳಿವೆ. ಯಾವುದೇ ಸಂಖ್ಯೆಗಳ ಮೊತ್ತ 17 ಆಗುವಂತೆ ಕೊಟ್ಟಿರುವ ಚಾರ್ಟ್‌ನಲ್ಲಿ ಅವುಗಳನ್ನು 3 ಸಂಖ್ಯೆಗಳ ಮೇಲೆ ಇಡಲು ಬಯಸುತ್ತಾಳೆ. ರಾನುಗೆ ಸಂಖ್ಯೆಗಳನ್ನು ಹುಡುಕಲು ಸಹಾಯ ಮಾಡಬಲ್ಲಿರಾ?

4	9	6	7
16	0	8	5
15	13	1	2
17	10	3	12

©KTBS NOT TO BE REPUBLISHED

ಎಷ್ಟು ರೀತಿಗಳಲ್ಲಿ ನೀವು ಅದನ್ನು ಮಾಡಿದಿರಿ?
ನಿಮ್ಮ ಬಳಿ 2 ಬೀಜಗಳಿದ್ದರೆ, ಒಟ್ಟು ಮೊತ್ತ 17 ಪಡೆಯಲು ಯಾವ ಸಂಖ್ಯೆಗಳ ಮೇಲೆ ಅವುಗಳನ್ನು ಇಡುವಿರಿ?

15. ಒಂದೇ ರೀತಿಯ ನೆರಳು ಇರುವ ಚಿತ್ರಕ್ಕೆ ವೃತ್ತ ಹಾಕಿ.



i 


ii 

iii 

iv 

16. ಮುಂದೆ ನೀಡಿರುವ ಕಾರ್ಡ್‌ನಲ್ಲಿ 5 ರಿಂದ 9 ರವರೆಗಿನ ಸಂಖ್ಯೆಗಳನ್ನು ಅಡ್ಡಸಾಲು ಮತ್ತು ಕಂಬಸಾಲಿನ ಮೊತ್ತ ಸಮವಾಗಿರುವಂತೆ ಬರೆಯಿರಿ.










@KTBS NOT TO BE REPUBLISHED

17. ಕೂಡುವುದು ಅಥವಾ ಕಳೆಯುವುದರಿಂದ ಮಧ್ಯದ ಸಂಖ್ಯೆಯನ್ನು ಪಡೆಯಲು ಪ್ರಯತ್ನಿಸಿ.








18. ◯ ನಲ್ಲಿ ಸರಿಯಾದ ಸಂಖ್ಯೆ ಬರೆಯಿರಿ.





19. ಸರಿತಾ ಬಳಿ ನಾಲ್ಕು ಬೇರೆ ಬೇರೆ ಬೆಲೆಯ ನಾಣ್ಯಗಳಿವೆ.












ಸರಿಯಾಗಿ ₹49 ಖರ್ಚು ಮಾಡಲು ಅವಳು ಬಳಸಬೇಕಾದ ನಾಣ್ಯಗಳ ಕನಿಷ್ಠ ಸಂಖ್ಯೆ ಎಷ್ಟು?

@KTBS NOT TO BE REPUBLISHED

20. ಕಿತ್ತಳೆಯ  ಬೆಲೆ ಕಂಡುಹಿಡಿಯಿರಿ.

 +  = 8

 +  = 10

 = ☐

20. ನಾವು ಚೆಂಡಾಟ ಆಡೋಣ.



i. ಮೊತ್ತ 15 ಆಗುವಂತೆ 3 ಚೆಂಡುಗಳನ್ನು ಆರಿಸಿ.

ii. ಮೊತ್ತ ಗರಿಷ್ಠ ಆಗುವಂತೆ 3 ಚೆಂಡುಗಳನ್ನು ಆರಿಸಿ.

iii. ಮೊತ್ತ ಕನಿಷ್ಠ ಆಗುವಂತೆ 3 ಚೆಂಡುಗಳನ್ನು ಆರಿಸಿ.

@KTBS
NOT TO BE REPUBLISHED